28

ಇಲಾಖೆ / ವಿಷಯ : DEPARTMENT / SUBJECT: ಪ್ರಧಾನ ಮಂತ್ರಿ

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE : 1-12-20

# ಮಹಾಜನ ವರದಿಯನ್ನು ಸಂಸತ್ತು ಪರಿಶೀಲಿಸಬೇಕಾಗುವದು

ಸಂ.ಕ 1/12/20

## ಮೈಸೂರಿನ ನಿಯೋಗಕ್ಕೆ ಪ್ರಧಾನಿ ನಿವೇದನೆ

**ಹೊಸದಿಲ್ಲಿ, 30–** ಮೈಸೂರು–ಮಹಾರಾಷ್ಟ್ರ ಗಡಿತಂಟೆ ವಿಷಯದಲ್ಲಿ ತಾವು ಯಾವುದೇ ನಿರ್ದಿಷ್ಟ ಪರಿಹಾರ ಸೂತ್ರಕ್ಕೆ ಬದ್ಧರಾಗಿಲ್ಲವೆಂದೂ ಆದರೆ ಮಹಾಜನ ಆಯೋಗದ ವರದಿ ಸಲ್ಲಿಸಲ್ಪಟ್ಟ ನಂತರ ಪರಿಸ್ಥಿತಿಯಲ್ಲಿ ಸಾಕಷ್ಟು ಬದಲಾವಣೆಯಾಗಿದೆ ಮತ್ತು ಸಂಸತ್ತು ಅದನ್ನು (ವರದಿ) ಒಂದಿಲ್ಲೊಂದು ರೂಪದಲ್ಲಿ ಪರಿಶೀಲಿಸಬೇಕಾಗುವದು ಎಂದೂ ಪ್ರಧಾನಮಂತ್ರಿ ಶ್ರೀಮತಿ ಇಂದಿರಾಗಾಂಧಿಯವರು ಇಂದು ಅಪರಾಹ್ನ ಇಲ್ಲಿ ತಮ್ಮನ್ನು ಭೆಟ್ಟಿಯಾದ ಮೈಸೂರು ರಾಜ್ಯದ ಶಾಸಕರ ನಿಯೋಗಕ್ಕೆ ತಿಳಿಸಿದರು.

ಕಾವೇರಿ ನದಿ ನೀರಿನ ಹಂಚಿಕೆ ಸಂಬಂಧದಲ್ಲಿ ಪ್ರಸ್ತುತ ನಿಯೋಗವು ಸಲ್ಲಿಸಿದ ಮನವಿಯನ್ನು ಪೂರ್ಣ ಪರಿಶೀಲಿಸುವದಾಗಿಯೂ ಪ್ರಧಾನಿಯವರು ತಿಳಿಸಿದರು. ಮಹಾಜನ ಆಯೋಗದ ಶಿಫಾರಸುಗಳ ಆಧಾರದ ಮೇಲೆ ಸರಕಾರವು ವಿಧೇಯಕವೊಂದನ್ನು ಸಂಸತ್ತಿನಲ್ಲಿ ಮಂಡಿಸಿದರೆ, ಸಂಸತ್ತಿನಲ್ಲಿ ಆ ಬಗ್ಗೆ ಚರ್ಚೆ ನಡೆಯುವದಕ್ಕೆ ತಮ್ಮದೇನೂ ಅಭ್ಯಂತರವಿಲ್ಲೆಂದು ನಿಯೋಗವು ಪ್ರಧಾನಿಯವರಿಗೆ ತಿಳಿಸಿತು. ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಅವಿಭಾಜ್ಯ ಕಾಂಗ್ರೆಸ್ ಸರಕಾರವು ಮಹಾಜನ ಆಯೋಗದ ವರದಿಯನ್ನು ಕಾರ್ಯಾಚರಣೆಗೆ ತರುವಲ್ಲಿ ಮಾಡಿದ ವಿಳಂಬವು ಪ್ರಸ್ತುತ ಮೈಸೂರು ಮಹಾರಾಷ್ಟ್ರ ಗಡಿತಂಟೆ ವಿಷಯದಲ್ಲಿ ಅನವಶ್ಯಕ ಜಟಿಲತೆ ಹಾಗೂ ವಾದ–ವಿವಾದಗಳನ್ನು ಹುಟ್ಟಿಸಿದೆ ಎಂದರು.

50 ವರ್ಷಗಳ 1-12-1970